ಬೇಕು; ಮತ್ತು ಹೀಗೆ ಹೋಗುವುದಾದರೆ, ಗ್ರಾಮಾಂತರ ಪ್ರದೇಶದ ಜನತೆಯ ಎಂಥಾ ಪರಿಣಾಮ ವಾಗುತ್ತದೆ ಎನ್ನುವ ಬಗ್ಗೆ ನಾನು ಕೆಲವಾರು ವಿಷಯಗಳನ್ನು ಸೂಚಿಸಬಯಸುತ್ತೇನೆ.

ಇವತ್ತಿನ ಪರಿಸ್ಥಿತಿಗೆ ಸರ್ಕಾರದವರು ತಂದಿರತಕ್ಕ ಋಣಪರಿಹಾರ ಮಸೂದೆಯು ಸ್ವಾಗತಾರ್ಹ ವಾದರೂ, ಅದರಿಂದ ಜನಸಾಮಾನ್ಯರ ಮೇಲೆ, ಎಂಥಾ ಪರಿಣಾಮ ಬೀರುತ್ತದೆ ಮತ್ತು ಅವರಿಗೆ ಅದರಿಂದ ಶಾಶ್ವತ ಪರಿಹಾರ ದೊರೆಯುತ್ತದೆಯೇ ಎಂಬುದನ್ನು ನಾವು ಇವತ್ತಿನ ದಿವಸ ವಿಚಾರ ಮಾಡಬೇಕಾಗಿದೆ ಸರ್ಕಾರದವರೇನೋ ಬಡವರ ಉದ್ಧಾರಕ್ಕಾಗಿ ಅವರನ್ನು ಋಣ ವಿಮುಕ್ತರನ್ನಾಗಿ ಮಾಡಿದರು, ಆದರೆ, ಇವತ್ತಿನ ದಿವಸ ಹಳ್ಳಿಗಾಡುಗಳಲ್ಲಿ ಅವನಿಗೆ ಸಾಲ ಕೊಡುವುದಕ್ಕೆ ಯಾರೂ ಮುಂದೆ ಬರುವುದಿಲ್ಲ ಇವತ್ತಿನ ದಿವಸ ಹಳ್ಳಿಗಾಡಿನ ರೈತ ಬಡತನ ಸ್ಥಿತಿ ಶೋಚನೀಯವಾಗಿದೆ ಸರ್ಕಾರದವರೂ ಕೂಡ ಅತನನ್ನು ಋಣ ವಿಮುಕ್ತನನ್ನಾಗಿ ಮಾಡಿದ ಮೇಲೆ ಅವನು ಪುನಃ ಜೀವನ ಮಾಡುವುದಕ್ಕೆ ಯಾವುದೇ ಒಂದು ಸೌಲಭ್ಯವನ್ನು ಒದಗಿಸಿಕೊಡಲಿಲ್ಲ. ಆದುದರಿಂದ, ನಾನು ಈ ಸದನದಲ್ಲಿ ಸಲಹೆ ಕೊಡಲು ಇಚ್ಛೆ ಪಡುವುದೇನೆಂದರೆ: ಅವರನ್ನು ಋಣ ವಿಮುಕ್ತರನ್ನಾಗಿ ಮಾಡುವುದರ ಜೊತೆಗೇ ಅವರಿಗೆ ಹಣ ಸಹಾಯ ಸುಲಭವಾಗಿ ಸಿಕ್ಕುವಂಥ ಒಂದು ಪರ್ಯಾಯ ವ್ಯವಸ್ಥೆಯನ್ನು ಮಾಡಬೇಕಾಗಿತ್ತು. ಆದರೆ, ಸರ್ಕಾರದವರಂ ಅದನ್ನೂ ಮಾಡಲಿಲ್ಲ. ಈ ರೀತಿ ಮಾಡದೆ, ನೀವು ಸಾಲಗಾರರಲ್ಲ ಎಂದು ಆ ಜನತೆಗೆ ತಿಳಿಸಿ, ಅವರಿಗೆ ಅನೀತಿ ಕಲಿಸುತ್ತಿದ್ದಾರೆ. ಎಷ್ಟೋ ಜನ, ತಾವು ಪಡೆದ ಸಾಲವನ್ನು ಪ್ರಾಮಾಣಿಕವಾದ ರೀತಿಯಲ್ಲಿ ಮರುಪಾವತಿ ಮಾಡುತ್ತಿದ್ದರು. ಅಂತಹವರಿಗೆ ನೀವು ಸಾಲಗಾರರಲ್ಲ ಎಂದು ಸರ್ಕಾರದವರು ತಿಳಿಸಿದರು. ಅಷ್ಟೇ ಅಲ್ಲದೆ, ಗ್ರಾಮಗಳಲ್ಲಿ ಕೆಲವರು ಬಹಳ ಕಡಮೆ ಬಡ್ಡಿಗೆ ಸಾಲ ಕೊಡುವವರೂ ಇದ್ದರು, ಮತ್ತೆ ಆತ ಕಿರುಕುಳವನ್ನೂ ಸಾಲಗಾರನಿಗೆ ಕೊಡುತ್ತಿರಲಿಲ್ಲ ಇಂತಹವರಿಗೆ ಈಗ ಸಾಲ ಕೊಡುವ ಬುದ್ಧಿಯೇ ಇಲ್ಲ. ಸಾಲ ಕೊಡುತ್ತಿದ್ದವರೆಲ್ಲರೂ, ಈಗ ಸಾಲ ಕೊಡುವುದಕ್ಕೆ ಹೆದರುತ್ತಾರೆ. ಇದರಿಂದ ಹಳ್ಳಿಗಾಡಿನ ಬಡವರಿಗೆ ಬಹಳ ತೊಂದರೆಯಾಗುತ್ತಿದೆ. ಅಷ್ಟೇ ಅಲ್ಲದೆ, ವಿಜಾಪುರ ಮತ್ತು ಬೀದರ ಜಿಲ್ಲೆಗಳಲ್ಲಿ ಕಾಗದ ಪತ್ರಗಳ ಆಧಾರವಿಲ್ಲದೆಯೇ ಸಾಲ ನೀಡುವ ಮತ್ತು ತೆಗೆದುಕೊಳ್ಳುವ ವ್ಯವಹಾರ ನಡೆಯುತ್ತಿತ್ತು. ಅಂತಾ ಕಡೆಗಳಲ್ಲೆಲ್ಲಾ ಈ ಮಸೂದೆಯನ್ನು ತಂದಿರುವುದರಿಂದ ಬಹಳ ತೊಂದರೆಯಾಗಿದೆ ಆದುದರಿಂದ ಸರ್ಕಾರದವರು ಕೂಡಲೆ ಸಾಲದಿಂದ ಋಣ ವಿಮುಕ್ತರಾದ ಜನರಿಗೆ ಪರ್ಯಾಯ ರೂಪದಲ್ಲಿ ಹಣ ಸಹಾಯ ನೀಡುವುದಕ್ಕೆ ಏರ್ಪಾಡು ಮಾಡಬೇಕೆಂದು ಹೇಳಬಯಸುತ್ತೇನೆ

ಇನ್ನು ಬಿಜಾಪುರ ಜಿಲ್ಲೆಗಳಲ್ಲಿ ಕೆಲವರು ಈ ಕಾನೂನನ್ನು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ. ಕೆಲವರು ಆಲ್ತಿನವರನ್ನು ಬೆದರಿಸುತ್ತಾ ಇದ್ದಾರೆ. ಅವರ ಬಗ್ಗೆ ಮಾಹಿತಿಗಳನ್ನು ತಂದು ಕೊಡಿ ಎಂದರೆ, ನಾನು ತಂದುಕೊಡುತ್ತೇನೆ, ಆದುದರಿಂದ ಮಾನ್ಯ ಸಚಿವರು, ಬಿಜಾಪುರ ಜಿಲ್ಲೆಗೆ ಕೆಲವು ಸಿ.ಐ.ಡಿ.ಗಳನ್ನು ನೇಮಿಸಿ, ಅಲ್ಲಿ ಯಾವ ರೀತಿ, ಯಾರು ಯಾರು ಬೆದರಿಸುತ್ತಿದ್ದಾರೆ ಎಂಬುದನ್ನು ತಿಳಿದುಕೊಂಡು, ಅವರಿಗೆಲ್ಲಾ ಶಿಕ್ಷೆ ಕೊಡಬೇಕೆಂದು ಹೇಳುತ್ತೇನೆ.

ಮಾನ್ಯ ಸಚಿವ ಶ್ರೀ ಕೆ. ಎಚ್ ರಂಗನಾಥ್ ಅವರು ಸಮಾಜದಲ್ಲಿ ಬಹಳ ನಂಬಿಕೆಯುಳ್ಳವರು. ಆದುದರಿಂದ, ಅವರಲ್ಲಿ ಕೊನೆಯದಾಗಿ ಪ್ರಾರ್ಥನೆ ಮಾಡುವುದೇನೆಂದರೆ, ಋಣ ವಿಮುಕ್ತರನ್ನಾಗಿ ಮಾಡಿರುವ ಗ್ರಾಮಾಂತರ ಪ್ರದೇಶದ ಜನತೆಗೆ, ತಕ್ಷಣವೇ ಏನಾದರೂ ಒಂದು ಪರ್ಯಾಯ ವ್ಯವಸ್ಥೆಯನ್ನು ಮಾಡ ಬೇಕು, ತನ್ಮೂಲಕ ಅವರ ಜೀವನೋಪಾಯಕ್ಕೆ ಅನುವು ಮಾಡಿಕೊಡಬೇಕೆಂದು ಹೇಳಿ, ಇಷ್ಟು ಹೊತ್ತು ಮಾತನಾಡಲು ಅವಕಾಶ ಮಾಡಿಕೊಟ್ಟ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು.—ಈಗ ಸಭೆಯು ಎದ್ದು, ನಾಳೆ ಒಂದು ಗಂಟೆಗೆ ಪುನಃ ಸೇರಲಿದೆ.

The House adjourned at Six of the clock to meet again at One of the clock on Tuesday the 10th February 1976.

WD 3897—GPB—550—5-4-1976